ನಿಮ್ಮ ಕನಸಿನ ಜೀವನ ಸಂಗಾತಿಯನ್ನು ಕಂಡು ಹಿಡಿಯಲು ಇಂದೇ ನಮೂದಿಸಿಕೊಳ್ಳಿ. kannada matrimony Register FREE



# 34 ಸಾವಿರ ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

October 27, 2011 Share [-] Text [+]

Topics
ನಾ.ವಿಜಯಶಂಕರ್ ,
ಸೈಬರ್ ಅಪರಾಧ ,
,
ಈ ವಿಭಾಗದಿಂದ ಇನ್ನಷ್ಟು

ಬೆಂಗಳೂರು: `ತಂತ್ರಜ್ಞಾನವು ಹಲವು ಸಂದರ್ಭಗಳಲ್ಲಿ ವರವಾಗುವ ಬದಲು ಶಾಪವಾಗಿದೆ` ಎಂದು ಕಾನೂನು ಸಲಹೆಗಾರ ನಾ.ವಿಜಯಶಂಕರ್ ನುಡಿದರು. `ಬೆಂಗಳೂರು ವಿಜ್ಞಾನ ವೇದಿಕೆ`ಯು ನಗರದ ನ್ಯಾಷನಲ್ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ `ಅಂತರ್ಜಾಲ ಅಪರಾಧಗಳು ಮತ್ತು ರಕ್ಷಣೆ` ಕುರಿತು ಅವರು ಉಪನ್ಯಾಸ ನೀಡಿದರು.

`ನಾವು ಜೀವಿಸುತ್ತಿರುವ ಸಮಾಜ ಡಿಜಿಟಲ್ ಸಮಾಜವಾಗಿದ್ದು, ನಮ್ಮ ಗಮನಕ್ಕೆ ಬಾರದೆಯೇ ನಮಗೆ ಸಂಬಂಧಪಟ್ಟ ಎಷ್ಟೋ ಮಾಹಿತಿಗಳು ಬೇರೆಯವರಿಗೆ ಸೋರಿಕೆಯಾಗುತ್ತಿವೆ. ಮಾಹಿತಿ ತಂತ್ರಜ್ಞಾನದಿಂದ ಲಾಭವಾದಷ್ಟು ನಷ್ಟವೂ ಆಗುತ್ತಿದೆ. ಆದ್ದರಿಂದಲೇ ಭಾರತ ಸರ್ಕಾರ ಸೈಬರ್ ಅಪರಾಧಗಳ ಕಾನೂನನ್ನು 2000ರಲ್ಲಿ ಜಾರಿಗೊಳಿಸಿದೆ` ಎಂದು ಹೇಳಿದರು.

`ಸೈಬರ್ ಅಪರಾಧಗಳಿಂದ ಈ ವರ್ಷ ಒಟ್ಟು 34 ಸಾವಿರ ಕೋಟಿ ರೂಪಾಯಿ ನಷ್ಟವಾಗಿದೆ. ಅದರಲ್ಲಿ ಕ್ರೆಡಿಟ್ ಕಾರ್ಡ್, ಎಟಿಎಂ ಕಾರ್ಡುಗಳ ದುರ್ಬಳಕೆಯಿಂದಾದ ನಷ್ಟ 6,500 ಕೋಟಿ ರೂಪಾಯಿಗಳು` ಎಂದು ಮಾಹಿತಿ ನೀಡಿದರು.

`ಎಟಿಎಂ ಕಾರ್ಡು ನಮ್ಮ ಬಳಿ ಇದ್ದಾಗಲೂ ಬೇರೆಯವರು ಅದರ ಮಾಹಿತಿಯನ್ನು ಕದ್ದು ನಮ್ಮ ಖಾತೆಯ ಹಣವನ್ನು ಪಡೆದ ಹಲವಾರು ಪ್ರಕರಣಗಳು ದಾಖಲಾಗಿವೆ. ಬ್ಯಾಂಕುಗಳು ತಮ್ಮ ಎಟಿಎಂಗಳಿಗೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸದೇ ಇರುವುದು ಮತ್ತು ಸಿ.ಸಿ. ಟಿವಿ ಕ್ಯಾಮೆರಾಗಳನ್ನು ಅಳವಡಿಸದೇ ಇರುವುದರಿಂದ ಇಂಥ ಅವಘಡಗಳು ಸಂಭವಿಸುವ ಪ್ರಮಾಣ ಹೆಚ್ಚು` ಎಂದರು.

`ಇ ಮೇಲ್ ಬಂದ ನಂತರ ಯುವಕರು ಅಂಚೆ ಕಾರ್ಡುಗಳನ್ನು ಬಳಸುವುದನ್ನೇ ನಿಲ್ಲಿಸಿದ್ದಾರೆ. ಇನ್ನಷ್ಟು ವರ್ಷಗಳು ಕಳೆದರೆ ಕಾರ್ಡುಗಳೆಂದರೆ ಏನು ಎಂದು ಕೇಳುವ ಸಂದರ್ಭಗಳೂ ಬರಬಹುದು. ಆದರೆ ತಾಂತ್ರಿಕತೆ ಮುಂದುವರೆದಂತೆಲ್ಲ ಹೆಚ್ಚಾಗುತ್ತಿರುವ ಸೈಬರ್ ಅಪರಾಧಗಳಿಗೂ ಕಡಿವಾಣ ಬೀಳಬೇಕು` ಎಂದರು.

Like 0 Comments (0)

[-] Text [+]

Homespace.in FOR BEST HOMES & OFFICES YOUR INVALUABLE GUIDE TO PROPERTY SEARCH ENDS HERE...

Post Your Comments Language Selection kannada

Name Email Id

Enter Security Code Security Code hfkl4uw

submit

kannada matrimony FROM BHARATMATRIMONY ಅರ್ಹತೆಯುಳ್ಳ ಲಕ್ಷಾಂತರ ಪ್ರೊಫೈಲ್‌ಗಳಿಂದ ನಿಮ್ಮ ಜೀವನ ಸಂಗಾತಿಯನ್ನು ಆಯ್ದುಕೊಳ್ಳಿ. Register FREE

RSA vs AUS IND vs ENG PAK vs SL
South Africa vs Australia , 3rd ODI
Kingsmead, Durban
Oct 28, 2011, 18:00 IST
Detailed Score Commentary

Most Read Most Comment Most Rated
ಸಹಾಯಕ ಪ್ರಾಧ್ಯಾಪಕನ ಐಷಾರಾಮಿ ಜೀವನ
ಎಚ್‌ಡಿಕೆ ದಂಪತಿ ನಿಟ್ಟುಸಿರು: ವಕೀಲ ವಿನೋದ್ ಕುಮಾರ್‌ಗೆ ದಂಡ
ಇವರಿಗೆ ದೀಪಾವಳಿಯೂ ಕತ್ತಲು
ಮುಂಬೈನಲ್ಲಿ ಬೆಳಗಿದ ರೈನಾ, ಕೊಹ್ಲಿ
ಟಿ.ವಿ.ಯಲ್ಲಿ ಕಾರ್ಯಕ್ರಮ ವೀಕ್ಷಿಸಿದ ಯಡಿಯೂರಪ್ಪ
ಭೂ ಹಗರಣ: ಎಚ್‌ಡಿಕೆ ದಂಪತಿ ನಿರಾಳ
ಅಶೋಕ್: ದಾಖಲೆ ಸಂಗ್ರಹಕ್ಕೆ 3 ತಂಡ

ಚಿತ್ರ | ವಿಡಿಯೋ | ಆಡಿಯೋ

thumbimg thumbimg



ಮದುವೆಯಾಗಲು ಬಯಸಿದ್ದೀರಾ? ಇದೀಗ ಕನ್ನಡ ಮ್ಯಾಟ್ರಿಮನಿ.ಕಾಮ್‌ನಲ್ಲಿ ನಮೂದಿಸಿಕೊಳ್ಳಿ. Register NOW kannada matrimony FROM BHARATMATRIMONY

©

2011 The Printers (Mysore) Private Ltd.,No 75, M.G Road, Post Box 5331, Bangalore - 560001

Design and developed by 4c Plus